ಓ ಎಸ್ ನಂ. 321/2018

ಡಿ. ಡಬ್ಲ್ಯೂ : 1

ದಿಃ 03.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಲ್ ಎಸ್ ವಕೀಲರಿಂದಃ

ನಾನು 5 ನೆ ತರಗತಿಯವರೆಗೆ ಓದಿದ್ದು, ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಬರುತ್ತದೆ. ನಿ ಪಿ 1 ರಲ್ಲಿ ನಾನು ಸಹಿ ಮಾಡಿದ್ದು, ಆ ಸಹಿಯನ್ನು ನಾನು ಉಪ ನೋಂದಾಣಾಧಿಕಾರಿಗಳ ಕಚೇರಿಯಲ್ಲಿ ಮಾಡಿರುತ್ತೇನೆ. ನಿ ಪಿ 1 ರಲ್ಲಿ ನಾನು ಸಹಿ ಮಾಡುವ ಸಂದರ್ಭದಲ್ಲಿ ಗುರುಪ್ರಸಾದ್ ಮತ್ತು ಅಲ್ಲೇ ಕೆಲಸ ಮಾಡುವ ಒಬ್ಬ ಹೆಣ್ಣು ಮಗಳು ಇದ್ದಳು. ನಾನು ವಾದಿಯ ಕಡೆಯಿಂದ ಒಂದು ಬಾರಿ ಹಣವನ್ನು ಚೆಕ್ ಮುಖಾಂತರ ಪಡೆದಿರುತ್ತೇನೆ. ನಾನು ಅವರ ಹತ್ತಿರ ನಗದಿನ ಮೂಲಕ ಹಣವನ್ನು ಪಡೆದುಕೊಂಡಿರುವುದಿಲ್ಲ. ನಾನು ವಾದಿಯ ಹತ್ತಿರ ಹಣವನ್ನು ಉಪ ನೋಂದಾಣಾಧಿಕಾರಿಗಳ ಕಚೇರಿಯ ಹೊರಗೆ ನಿಪಿ 1 ನೋಂದಣಿ ಯಾದ ದಿನವೇ ಪಡೆದಿರುತ್ತೇನೆ. ನಿಪಿ 1 ನ್ನು ಮಾಗಡಿಯ ತಾಲ್ಲೂಕು ಕಚೇರಿಯ ಪಕ್ಕದಲ್ಲಿ ಮಾಡಿಸಲಾಗಿರುತ್ತದೆ. ಟೈಪ್ ಮಾಡುವಾಗ ನಾನು ಇರಲಿಲ್ಲ. ನಿಪಿ 1 ನ್ನು ನಾನೇ ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ನಿಪಿ 1 ರಲ್ಲಿ ಇರುವ ವಿಷಯ ನಿಪಿ 1 ನೋಂದಣಿ ಆದ 2 ದಿನಗಳ ನಂತರ ಗೊತ್ತಾಗಿರುತ್ತದೆ. ನಾನು ಸದರಿ ನಿಪಿ 1 ರ ಬಗ್ಗೆ ನೋಂದಣಿಯಾದ 2 ದಿನಗಳ ನಂತರ ಅದನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ನಿಪಿ 1 2014 ರಲ್ಲಿ ಆಗಿರುತ್ತದೆ. ನಿಪಿ 1 ಆದ ನಂತರ ನಾನು ಪ್ರತಿವಾದಿಗಳ ಹತ್ತಿರ ಹೋಗಿ ಮಾತನಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ನನಗೆ ಕಳುಹಿಸಿರುವ ತಿಳುವಳಿಕೆ ನೋಟೀಸ್ ನ್ನು ನನ್ನ ವಕೀಲರಿಗೆ ತೋರಿಸಿ ಅದರಲ್ಲಿ ಇರುವ ವಿಷಯಗಳನ್ನು ತಿಳಿದುಕೊಂಡಿರುತ್ತೇನೆ. ಸದರಿ ನೋಟೀಸ್ ಗೆ ಉತ್ತರವನ್ನು ನೀಡಿರುತ್ತೇನೆ. ಆ ಉತ್ತರವನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸಾಕ್ಷಿ ನಾನು ಮರೆತಿರಬಹುದು ಎಂದು ನುಡಿಯುತ್ತಾರೆ.

ವಾದಿಗಳು ಜಮೀನನ್ನು ನೋಡಲು ಬಂದಿರಲಿಲ್ಲ. ವಾದಿಗಳು ಗುರುಪ್ರಸಾದ್ ರವರ ಮೂಲಕ ನನಗೆ ಪರಿಚಯವಾಗಿರುತ್ತಾರೆ. ಗುರುಪ್ರಸಾದ್ ನಮ್ಮ ಪಕ್ಕದ ಊರಿನವರಾಗಿರುತ್ತಾರೆ. ಗುರುಪ್ರಸಾದ್ ರವರು ನನ್ನ ಜಮೀನನ್ನು ವಾದಿಗಳಿಗೆ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನಿ ಪಿ 1 ರಲ್ಲಿ ಇರುವ ಸಾಕ್ಷಿದಾರರು ನನಗೆ ಪರಿಚಯವಾಗಿದ್ದು, ವಾದಿಗಳಿಗೆ ಪರಿಚಯ ಇರುವುದಿಲ್ಲ

ಎಂದರೆ ಸಾಕ್ಷಿ ನನಗೆ ಗುರುಪ್ರಸಾದ್ ರವರು ಪರಿಚಯ ಇರುತ್ತಾರೆ, ಆದರೆ ಮತ್ತೊಬ್ಬ ಸಾಕ್ಷಿ ಪರಿಚಯ ಇರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಗಳು ನನ್ನ ಹತ್ತಿರ ನೋಂದಾಯಿತ ಕ್ರಯಪತ್ರ ಮಾಡಿಕೊಡಲು ಒತ್ತಾಯ ಮಾಡಿರುವುದಿಲ್ಲ. ಉಪ ನೋಂದಾಣಾಧಿಕಾರಿಗಳ ಕಚೇರಿಗೆ ಪ್ರತಿವಾದಿಗಳು ನಾವು ಬರುತ್ತೇವೆಂದು 2 ಬಾರಿ ತಪ್ಪಿಸಿಕೊಂಡಿರುತ್ತೇವೆ ಎಂದರೆ ಸುಳ್ಳು. ನಾವು ವಾದಿಗಳಿಗೆ ಪಡೆದಿರುವ ಹಣವನ್ನು ಹಿಂದಿರುಗಿಸಿರುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ಪ್ರತಿ ತಿಂಗಳು ರೂ. 9 ಸಾವಿರದಂತೆ ಹಣವನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ವಾದಿಗೆ ಹಣವನ್ನು ಕೊಟ್ಟಿರುವುದಕ್ಕೆ ಯಾವುದೇ ದಾಖಲಾತಿಗಳು ನನ್ನ ಹತ್ತಿರ ಇರುವುದಿಲ್ಲ ಎಂದರೆ ಸಾಕ್ಷಿ ನಾನು ಒಮ್ಮೆ ಹಣವನ್ನು ಚೆಕ್ ಹಾಳೆಯ ಮುಖಾಂತರ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಕ್ಯಾಷ್ ಒಚರ್ ಗಳು ನನ್ನ ಹತ್ತಿರ ಇರುವುದಿಲ್ಲ ಎಂದರೆ ಸರಿ. ನಾನು ಉಳಿದ ಹಣವನ್ನು ಚೆಕ್ ಮುಖಾಂತರ ಕೊಡಬಹುದಾಗಿತ್ತು ಎಂದರೆ ಸಾಕ್ಷಿ ನನಗೆ ಇದರ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ನನ್ನ ಹೆಸರಿಗೆ ವಿಲ್ ಮುಖಾಂತರ ಬಂದಿರುತ್ತವೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕೆ ಎಲ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**